ರಾಜ್ಯದಲ್ಲಿರುವ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಬರಬೇಕಾದ ವಾರ್ಷಿಕ ವರದಿಗಳು

511 - ಶ್ರೀ ಜೆ.ಟಿ. ಪಾಟೀಲ್ (ಬೀಳಗಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದ ಎಲ್ಲಾ ನಗರಾಭಿವೃದ್ಧಿ ಪ್ರಾಧಿಕಾರಗಳು ತಮ್ಮ ವಾರ್ಷಿಕ ಮತ್ತು ಲೆಕ್ಕ ಪರಿಶೋಧನಾ ವರದಿಗಳನ್ನು ಕಾಲಕ್ಕೆ ಸರಿಯಾಗಿ ಸಲ್ಲಿಸುತ್ತಿವೆಯೇ?*

ಆ) *ಹಾಗಿದ್ದಲ್ಲಿ ಯಾವ ಯಾವ ಪ್ರಾಧಿಕಾರಿಗಳಿಂದ ಯಾವ ಯಾವ ಸಾಲಿನ ವಾರ್ಷಿಕ ವರದಿಗಳನ್ನು ಇದುವರೆವಿಗೂ ಸರ್ಕಾರಕ್ಕೆ ಸಲ್ಲಿಸಿರುವುದಿಲ್ಲ.*

ಇ) *ಈ ದಿಸೆಯಲ್ಲಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು?*

ಶ್ರೀ ವೈಜನಾಥ್ ಪಾಟೀಲ್ (ನಗರಾಭಿವೃದ್ಧಿ ಸಚಿವರು) :

ಅ) ಇದುವರೆಗೆ ನಗರಾಭಿವೃದ್ಧಿ ಪ್ರಾಧಿಕಾರಗಳ ಆಯುಕ್ತರು ವರದಿಗಳನ್ನು ಕಾಲ ಕಾಲಕ್ಕೆ ಸಲ್ಲಿಸುತ್ತಿರಲಿಲ್ಲ . ಆದರೆ ಸರ್ಕಾರವು ಎಲ್ಲಾ ಬಾಕಿ ಇರುವ ಎಲ್ಲಾ ವರದಿಗಳನ್ನು ಪಡೆಯಲು ಕ್ರಮ ಕೈಗೊಂಡಿದ್ದು ಬಾಕಿ ಇರುವ ವರದಿಗಳನ್ನು ಪಡೆದು ಕಾರ್ಯದರ್ಶಿ ಕರ್ನಾಟಕ ವಿಧಾನ ಮಂಡಲಕ್ಕೆ ಕಳುಹಿಸಲಾಗಿದೆ.

ಆ) ಪಟ್ಟಿಯನ್ನು ಲಗತ್ತಿಸಿದೆ.

ಇ) ಬಾಕಿ ಇರುವ ಎಲ್ಲಾ ವರದಿಗಳನ್ನು ಪಡೆಯುವ ಸಲುವಾಗಿ ಸರ್ಕಾರವು ದಿನಾಂಕ 24-11-95 ಹಾಗೂ 7-12-95ರಂದು ಎಲ್ಲಾ ನಗರಾಭಿವೃದ್ಧಿ ಆಯುಕ್ತರುಗಳು ಸಭೆಯನ್ನು ನಡೆಸಲಾಗಿದೆ. ಮತ್ತು ಬಾಕಿ ಇರುವ ಎಲ್ಲಾ ವರದಿಗಳನ್ನು ಫೆಬ್ರವರಿ 1996ರ ಒಳಗಾಗಿ ಕಳುಹಿಸಲು ಸೂಚಿಸಲಾಗಿದೆ. ಆದರಂತೆ ಬಹುತೇಕ ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ವರದಿಗಳು ಬಂದಿದ್ದು ಅವುಗಳನ್ನು ಕಾರ್ಯದರ್ಶಿ ಕರ್ನಾಟಕ ವಿಧಾನ ಮಂಡಲಕ್ಕೆ ಕಳುಹಿಸಿಕೊಡಲಾಗಿದೆ.

ನಗರಾಭಿವೃದ್ಧಿ ಪ್ರಾಧಿಕಾರಗಳಿಂದ ಬರಬೇಕಾಗಿರುವ ವಾರ್ಷಿಕ ವರದಿ ಮತ್ತು ಲೆಕ್ಕ ಪರಿಶೋಧನಾ ಪಟ್ಟಿ.

ಕ್ರಮ ಸಂಖ್ಯೆ	*ನಗರಾಭಿವೃದ್ಧಿ ಪ್ರಾಧಿಕಾರಗಳ ಸಂಖ್ಯೆ*	*ಬಾಕಿ ಇರುವ ವಾರ್ಷಿಕ ವರದಿಗಳು*	*ಬಾಕಿ ಇರುವ ಲೆಕ್ಕ ಪರಿಶೋಧನಾ ವರದಿಗಳು*
1)	ಮಡಿಕೇರಿ	ಪ್ರಾರಂಭವಾದಾಗಿನಿಂದ 1994-95	ಪ್ರಾರಂಭವಾದಗಿನಿಂದ 1994-95
2)	ಕೆ.ಜಿ.ಎಫ್.	ಪ್ರಾರಂಭವಾದಾಗಿನಿಂದ 1994-95	ಪ್ರಾರಂಭವಾದಾಗಿನಿಂದ -
3)	ಕೋಲಾರ	1988-89	-

ಕ್ರಮ ಸಂಖ್ಯೆ	ನಗರಾಭಿವೃದ್ಧಿ ಪ್ರಾಧಿಕಾರಗಳ ಸಂಖ್ಯೆ	ಬಾಕಿ ಇರುವ ವಾರ್ಷಿಕ ವರದಿಗಳು	ಬಾಕಿ ಇರುವ ಲೆಕ್ಕ ಪರಿಶೋಧನಾ ವರದಿಗಳು
		1989-90	-
		1990-91	-
4)	ಮೈಸೂರು	-	1994-95
5)	ಬಾಗಲಕೋಟೆ	1994-95	1994-95

ಬೆಂಗಳೂರಿನ ವಿಧಾನ ಸೌಧದ ಮುಂದೆ ಬಾಬು ಜಗಜೀವನರಾಂರವರ ಪ್ರತಿಮೆ ಸ್ಥಾಪನೆ.

512 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರಿನ ವಿಧಾನಸೌಧದ ಮುಂದೆ ಶ್ರೀ ಬಾಬು ಜಗಜೀವನರಾಂರವರ ಪ್ರತಿಮೆಯನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದೆಯೇ?

ಆ) ಹಾಗಿದ್ದಲ್ಲಿ ಇದಕ್ಕಾಗಿ ಸ್ಥಳವನ್ನು ನಿಗಧಿ ಪಡಿಸಲಾಗಿದೆಯೇ?

ಇ) ಇದಕ್ಕಾಗಿ ತಗಲುವ ಅಂದಾಜುವೆಚ್ಚವೆಷ್ಟು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಸಮಾಜ ಕಲ್ಯಾಣ ಸಚಿವರು) :

ಅ) ವಿಧಾನ ಸೌಧದ ಮುಂದೆಯೇ ಸ್ಥಾಪನೆ ಮಾಡಬೇಕೆಂದು ಹಲವಾರು ಸಂಘಸಂಸ್ಥೆಗಳು ಒತ್ತಾಯ ಮಾಡುತ್ತಿರುವುದರಿಂದ ಈ ಪ್ರಸ್ತಾವನೆ ಸದ್ಯಕ್ಕೆ ಸರ್ಕಾರದ ಪರಿಶೀಲನೆಯಲ್ಲಿದೆ.

ಆ) ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಪ್ರತಿಮೆ ಕೆಲಸ ಮುಗಿದಿದೆ. ಪ್ರತಿಮೆಯನ್ನು ಆದಷ್ಟು ಬೇಗನೆ ಸ್ಥಾಪಿಸಲಾಗುವುದು.

ಈ) ಪ್ರತಿಮೆ ರೂ. 7.45.00 (ಏಳು ಲಕ್ಷದ ನಲ್ವತ್ತೈದು ಸಾವಿರ ರೂಪಾಯಿಗಳು ಮಾತ್ರ) ವೆಚ್ಚವಾಗಿದೆ. ಪ್ರತಿಮೆಯನ್ನು ಸ್ಥಾಪಿಸಲು ಗ್ರಾನೈಟ್ ಕಲ್ಲಿನಿಂದ ಪ್ಲಾಟಫಾರಂ ನಿರ್ಮಿಸಲು ತಗಲಬಹುದಾಗ ಅಂದಾಜುಪಟ್ಟಿಯನ್ನು ರವಾನಿಸಲು ಕಾರ್ಯಪಾಲಕ ಅಭಿಯಂತರರು, ನಂ.1, ಕಟ್ಟಡಗಳ ವಿಭಾಗ, ಬೆಂಗಳೂರು ಇವರನ್ನು ಕೋರಲಾಗಿದೆ.

ಬೆಂಗಳೂರಿನಲ್ಲಿರುವ ಕೈಮಗ್ಗ ಅಭಿವೃದ್ಧಿ ನಿಗಮದ ಕಛೇರಿಯನ್ನು ಹುಬ್ಬಳ್ಳಿಗೆ ವರ್ಗಾವಣೆ

513 - ಶ್ರೀ ರಾಮಲಿಂಗಾರೆಡ್ಡಿ (ಜಯನಗರ) : ಮಾನ್ಯ ಸಕ್ಕರೆ ಜವಳಿ ವಿಜ್ಞಾನ ಮತ್ತು ತಂತ್ರಜ್ಞಾನ ಜೀವಿಶಾಸ್ತ್ರ ಮತ್ತು ಪರಿಸರ ರಾಜ್ಯ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?